ಶ್ರೀ ಎನ್. ಯೋಗೀಶ್ ಭಟ್ : ಗ್ರಾಮಾಂತರ ಪ್ರದೇಶಗಳಲ್ಲಿ ಸಂಪನ್ಮೂಲಗಳಿಲ್ಲದ ಸುಮಾರು 24,229 ಧಾರ್ಮಿಕ ಸಂಸ್ಥೆಗಳು ಹಾಗೂ ದೇವಾಲಯಗಳಿವೆ. ಉದ್ದೇಶಿತ ಏಕರೂಪಾದ ಮಸೂದೆಯಲ್ಲಿ ಇಂಥ ಸಂಸ್ಥೆಗಳಿಗೆ ಆರ್ಥಿಕ ಸಹಾಯ ಒದಗಿಸಲು, ಕಾಮನ್ ಪೂಲ್ ಫಂಡ್ ಎಂಬ ನಿಧಿ ಸ್ಥಾಪಿಸಲು 97-98ರಲ್ಲಿ ಅವಕಾಶ ಮಾಡಲಾಗಿದೆ. ಅದೇ ರೀತಿ, 98-99ರಲ್ಲಿ ಎಷ್ಟು ಹಣವನ್ನು ಕಾಮನ್ ಪೂಲ್ ಫಂಡ್ ಇದರಲ್ಲಿ ಇಟ್ಟಿದ್ದೀರಿ? ಎಷ್ಟು ದೇವಸ್ಥಾನಗಳಿಗೆ ಆರ್ಥಿಕ ಸಹಾಯವನ್ನು ತಾವು ಮಾಡಿದ್ದೀರಿ? ಈ ವಿವರ ಕೊಡಬೇಕು.

ಡಾ|| ಎಂ. ಶಂಕರನಾಯಕ್ (ಮುಜರಾಯಿ ಸಚಿವರ ಪರವಾಗಿ) : ಕಾಮನ್ ಪೂಲ್ ಫಂಡ್ ಶಾಸನವೇ ಆಗಿಲ್ಲ. ಅದಾದನಂತರ, ನಿಗದಿಯಾಗುತ್ತದೆ.

ಶ್ರೀ ಎನ್. ಯೋಗೀಶ್ ಭಟ್ : ಕನಿಷ್ಠ ವೇತನಕ್ಕೆ ಸಂಬಂಧಿಸಿದಂತೆ ನಾನು ಪ್ರಶ್ನೆ ಕೇಳಿದ್ದೆ. ಇಲ್ಲಿ ಕೊಟ್ಟ ಉತ್ತರದಲ್ಲಿ ಆದಾಯಕ್ಕನುಗುಣವಾಗಿ ಎಂದು ಹೇಳಿದ್ದಾರೆ. ಎಷ್ಟು ಆದಾಯಕ್ಕನುಗುಣವಾಗಿ ಕನಿಷ್ಠ ವೇತನ ನಡೆಯುತ್ತಿದೆ? ಆದಾಯದ ಲಿಮಿಟ್ ಎಷ್ಟೆಂದು ಹೇಳಿ.

ಡಾ|| ಎಂ. ಶಂಕರನಾಯಕ್ : ನಾನು ಆಗಲೇ ಹೇಳಿದೆ. ಮಲೆ ಮಹದೇಶ್ವರ, ಶ್ರೀಕಂಠೇಶ್ವರದಂತಹ ಮೇಜರ್ ದೇವಸ್ಥಾನಗಳಲ್ಲಿ ಸರ್ಕಾರಿ ಸಿಬ್ಬಂದಿಗೆ ಅವರೇ ವೇತನ ಕೊಡುತ್ತಿದ್ದಾರೆ. ಉಳಿದ ದೇವಸ್ಥಾನಗಳಿಗೆ ಅವರ ಆದಾಯಕ್ಕನುಗುಣವಾಗಿ ದೇವಸ್ಥಾನದವರೇ ಕೆಲವರಿಗೆ 500 ರೂ. ಇರಬಹುದು, 250 ರೂ. ಇರಬಹುದು, ಎಷ್ಟೆಂದು ನಿಗದಿಯಾಗಿಲ್ಲ. ಒಂದು ವೇಳೆ ಆದಾಯ ಹೆಚ್ಚಾದಾಗ 3 ವರ್ಷಗಳಿಗೊಮ್ಮೆ ವೇತನವನ್ನೂ ಹೆಚ್ಚು ಮಾಡುವ ವ್ಯವಸ್ಥೆ ಮಾಡಿಕೊಂಡಿದ್ದೇವೆ. ಈಗೇನು ಕಾಮನ್ ಪೂಲ್ ಫಂಡ್ ಬರುತ್ತದೆ, ಅದು ಬಂದಾಗ ಅವರಿಗೆಲ್ಲರಿಗೂ ಸಮನಾದ ವೇತನ ಕೊಡಲು ಇದರಲ್ಲಿ ಅವಕಾಶ ಮಾಡುತ್ತೇವೆ. ಅದಕ್ಕೆ ನಿಯಮಾವಳಿಗಳನ್ನು ನಾವು ಮಾಡಿಕೊಂಡು ಅದರ ಪ್ರಕಾರ ಅದರಲ್ಲಿ ಹಂಚಿಕೆ ಮಾಡಬೇಕಾಗುತ್ತದೆ. ಅದಾಗುವವರೆಗೂ ನಿರ್ದಿಷ್ಟವಾಗಿ ಇಂಥಿಂಥ ದೇವಸ್ಥಾನಗಳಿಗೆ ಇಷ್ಟೇ ಎಂದು ಹೇಳಲು ಬರುವುದಿಲ್ಲ.

ಬಸವಕಲ್ಯಾಣದಲ್ಲಿ ನಗರ ಸಾರಿಗೆ ಬಸ್ಸುಗಳ ಸಂಚಾರ

188 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ (ಬಸವ ಕಲ್ಯಾಣ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣದಲ್ಲಿ ನಗರ ಸಾರಿಗೆ ಬಸ್‌ಗಳ ಓಡಾಟವನ್ನು ಪ್ರಾರಂಭಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಪ್ರತಿದಿನ ಓಡಾಡುತ್ತಿರುವ ನಗರ ಸಾರಿಗೆ ಬಸ್‌ಗಳ ಸಂಖ್ಯೆ ಎಷ್ಟು?

ಇ) ಈ ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರದವರು ಕೈಕೊಳ್ಳಲಿರುವ ಕ್ರಮಗಳೇನು?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಇಲ್ಲಾ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ : ಬಸವಕಲ್ಯಾಣ ಮಹತ್ವದ ಸ್ಥಾನವಾಗಿದ್ದು, ಪ್ರವಾಸಿ ಕೇಂದ್ರವಾಗಿದೆ. ಇದು ಒಂದು ಲಕ್ಷ ಜನಸಂಖ್ಯೆ ಹೊಂದಿದ್ದು ಮತ್ತು ಬಿಸಿನೆಸ್ ಸೆಂಟರ್ ಆಗಿದೆ. ಬಹಳಷ್ಟು ಪ್ರವಾಸಿಗರು ದಿನನಿತ್ಯ ಓಡಾಡುತ್ತಿದ್ದಾರೆ. ರಾಷ್ಟ್ರೀಯ ಹೆದ್ದಾರಿ ಸಂ:9 ಇದ್ದು, ಪ್ರಮುಖ ಪಟ್ಟಣವಾಗಿದೆ. ಇಲ್ಲಿ ಬಸ್ಸುಗಳಿಲ್ಲದೆ ತೊಂದರೆಯಾಗುತ್ತಿದೆ. ನಾನು ನೇರವಾಗಿ ಮಾನ್ಯ ಮಂತ್ರಿಗಳ ಗಮನಕ್ಕೆ ತರಲು ಬಯಸುವುದೇನೆಂದರೆ, ಬಸವ ಕಲ್ಯಾಣದಿಂದ ಬಾಂಬೆ-ಹೈದರಾಬಾದ್ ಕಡೆಗೆ ಬಹಳಷ್ಟು ಜನ ಹೋಗುತ್ತಿದ್ದಾರೆ. ಅಲ್ಲಿ ಸುಮಾರು 8 ಸಾವಿರ ಲಾರಿಗಳಿವೆ. ಇಡೀ ಕರ್ನಾಟಕದಲ್ಲಿ ಅತಿ ಹೆಚ್ಚಿನ ಲಾರಿಗಳಿರುವುದು ಅಲ್ಲಿಯೇ. ಟ್ರಾಫಿಕ್ ಬಹಳಷ್ಟು ಇದೆ. ಸಾಕಷ್ಟು ಸಾರಿಗೆ ಸೌಕರ್ಯಗಳನ್ನು ಏಕೆ ಒದಗಿಸುತ್ತಿಲ್ಲವೆಂದು ನಾನು ಸರ್ಕಾರವನ್ನು ಕೇಳುತ್ತಿದ್ದೇನೆ. ಸಾಕಷ್ಟು ಜನ ಮ್ಯಾಕ್ಸಿಕ್ಯಾಬ್‌ಗಳಲ್ಲೇ ಪ್ರಯಾಣ ಮಾಡುತ್ತಿದ್ದಾರೆ. ಟ್ರಾಫಿಕ್ ಸಲುವಾಗಿ, ಜನರ ಸಲುವಾಗಿ ನಗರ ಸಾರಿಗೆ ವ್ಯವಸ್ಥೆ ಮಾಡುತ್ತೀರಾ, ಹೇಗೆ?

ಶ್ರೀ ಎಂ. ಸಿ. ನಾಣಯ್ಯ (ಸಾರಿಗೆ ಸಚಿವರ ಪರವಾಗಿ) : ಬಸವಕಲ್ಯಾಣದ ಜನಸಂಖ್ಯೆ ಒಂದು ಲಕ್ಷ ಇದೆ ಎಂದು ಹೇಳಿದ್ದಾರೆ. ಆದರೆ, 91ರ ಜನಗಣತಿ ಪ್ರಕಾರ ಅದರ ಜನಸಂಖ್ಯೆ 41 ಸಾವಿರ. ಆದರೆ, ಬಸವಕಲ್ಯಾಣದ ಪಟ್ಟಣದೊಳಗೆ ನಗರ ಸಾರಿಗೆ ವ್ಯವಸ್ಥೆ ಮಾಡಲು ಕಾರ್ಯಕ್ರಮ ತೆಗೆದುಕೊಳ್ಳುವುದು ಸಧ್ಯಕ್ಕಿಲ್ಲ. ಆದರೆ, ಬಸವಕಲ್ಯಾಣದ ಘಟಕದಿಂದ ತಾಲ್ಲೂಕಿನ ಇತರೇ ಭಾಗಗಳಿಗೆ ಸುಮಾರು 21,606 ಕಿಲೋಮೀಟರ್ ದೂರವನ್ನು ಸುಮಾರು 59 ಬಸ್ಸುಗಳು ಸಂಚರಿಸುತ್ತಿದ್ದು, ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಲಾಗಿದೆ. ಇದರ ಜೊತೆಗೆ, ಬಸವಕಲ್ಯಾಣ ಮತ್ತು ಅದರ ಅಕ್ಕಪಕ್ಕದ ಗ್ರಾಮಾಂತರ ಪ್ರದೇಶಗಳಲ್ಲಿ ನಗರದಿಂದ 30 ಕಿ.ಮೀ. ದೂರದ ದುಂಡು ಸುತ್ತುಗಳೊಳಗೆ 14 ಮಾರ್ಗಗಳಲ್ಲಿ ಬಸ್ಸುಗಳು ಸಂಚರಿಸುತ್ತಿವೆ. ತಾವು ಹೇಳುತ್ತಿರುವುದು ಬಾಂಬೆಗೆ ಪಕ್ಕವಿದ್ದು, ನ್ಯಾಷನಲ್ ಹೈ-ವೇ ಆದುದರಿಂದ ನಗರ ಸಾರಿಗೆ ವ್ಯವಸ್ಥೆಯನ್ನು ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ಪ್ರಸ್ತುತವಾಗಿ ಈ ಕಾರ್ಯಕ್ರಮ ಇಲ್ಲ. ಕಾರಣ, ನಗರ ಪ್ರದೇಶಗಳಿಗೆ ನಾವೇನಾದರೂ ನಗರ ಸಾರಿಗೆ ವ್ಯವಸ್ಥೆ ಮಾಡಬೇಕಾದರೆ ಜನಸಂಖ್ಯೆ ಆಧಾರ ಮೇಲೆ ಮಾಡಬೇಕಾಗುತ್ತದೆ. ಜನಸಂಖ್ಯೆ ಕಡಿಮೆ ಇರುವ ಪ್ರದೇಶಗಳಲ್ಲಿ ನಗರ ಸಾರಿಗೆ ವ್ಯವಸ್ಥೆ ಮಾಡಿದರೆ ಕೆಎಸ್‌ಆರ್‌ಟಿಸಿಗೆ ಕಷ್ಟವಾಗುತ್ತದೆ. ಮುಂದಿನ ದಿನಗಳಲ್ಲಿ ಜನಸಂಖ್ಯೆ ಹೆಚ್ಚಾಗಿ, ಒತ್ತಡ ಹೆಚ್ಚಾದಾಗ ಸರ್ಕಾರ ಆ ಸಂದರ್ಭದಲ್ಲಿ ಇದನ್ನು ಯೋಚನೆ ಮಾಡುತ್ತದೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ : ಬಸವಕಲ್ಯಾಣದ ಜನಸಂಖ್ಯೆ ಬಗ್ಗೆ ಮಾನ್ಯ ಮಂತ್ರಿಗಳು ಹಿಂದಿನ ಸೆನ್ಸಸ್ ಪ್ರಕಾರ ಹೇಳುತ್ತಿದ್ದಾರೆ. ಈಗಿನ ಪ್ರಕಾರ ಜಾಸ್ತಿ ಇದೆ. ಸಾಕಷ್ಟು ಜನ ಬರುತ್ತಿದ್ದಾರೆ. Floating population ಹೆಚ್ಚಾಗಿದೆ. ಹೀಗಾಗಿ, ವಾಹನಗಳ ಅವಶ್ಯಕತೆ ಬಹಳವಿದೆ. ಹಿಂದೆ ಅವರು ಬಸವಕಲ್ಯಾಣದಿಂದ ಸಸ್ತಾಪುರ, ಬಸವಕಲ್ಯಾಣದಿಂದ ಮುಡಬಿ, ಬಸವಕಲ್ಯಾಣದಿಂದ

ರಾಜೇಶ್ವರ್, ಬಸವಕಲ್ಯಾಣದಿಂದ ಹುಲಸೂರ್ ಈ ಗ್ರಾಮಾಂತರ ಪ್ರದೇಶಗಳಿಗೆ ದಿನನಿತ್ಯ ಒಂದೊಂದು ಬಸ್ಸಿನ ವ್ಯವಸ್ಥೆ ಮಾಡಿದರು. ಡೀಸೆಲ್ ಕೊರತೆಯಿಂದಾಗಿ ಬಸ್ಸುಗಳನ್ನು ಸ್ಟಾಪ್ ಮಾಡಿದ್ದಾರೆ. ಈಗ ಮದುವೆ ಸೀಸನ್ ಇರುವುದರಿಂದ ಒಂದೆರಡು ಬಸ್ಸುಗಳನ್ನು ಓಡಿಸಿದರೆ ಒಳ್ಳೆಯದೆಂದು ನಾನು ಜನರ ಪರವಾಗಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಬಸವಕಲ್ಯಾಣದಿಂದ ಸಸ್ತಾಪುರ, ಬಸವ ಕಲ್ಯಾಣದಿಂದ ಮಂತ್ರಾಲಯಕ್ಕೆ ಎರಡು ಬಸ್ಸುಗಳಿದ್ದು, ಅದನ್ನು ಸ್ಟಾಪ್ ಮಾಡಿದ್ದಾರೆ.

ಶ್ರೀ ಎಂ. ಸಿ. ನಾಣಯ್ಯ : ಈ ಸಲಹೆಯನ್ನು ನಾವು ಪರಿಶೀಲಿಸುತ್ತೇವೆ. ಕಾರಣ, ಬಸವಕಲ್ಯಾಣದಿಂದ ಮಂತ್ರಾಲಯ ಮತ್ತು ಬಸವಕಲ್ಯಾಣದಿಂದ ಪಕ್ಕದಲ್ಲಿರುವ ಸ್ಥಳಗಳಿಗೆ 2 ಬಸ್ಸುಗಳನ್ನು ಕೇಳಿದ್ದಾರೆ. ಇದನ್ನು ನಾವು ಕೆಎಸ್ಆರ್‌ಟಿಸಿ ಮುಖಾಂತರ ಕೊಡಲು ಪರಿಶೀಲಿಸುತ್ತೇವೆ. ಒತ್ತಡ ಬಂದ ಸಂದರ್ಭದಲ್ಲಿ ಕೂಡ, ಹೆಚ್ಚಿಚ್ಚು ಬಸ್ಸುಗಳ ಅವಶ್ಯಕತೆ ಇದ್ದರೆ, ಬಸವಕಲ್ಯಾಣ ಮತ್ತು ತಾಲ್ಲೂಕಿನ ಇತರೇ ಭಾಗಗಳಿಗೆ ಬಸ್ಸನ್ನು ಹಾಕಲು ಕ್ರಮ ಕೈಗೊಳ್ಳತ್ತೇವೆ ಮತ್ತು 2 ಬಾಗಿಲುಗಳ 2 ಬಸ್ಸುಗಳನ್ನು ಒತ್ತಡಕ್ಕನು ಗುಣವಾಗಿ ಹಾಕಬೇಕೆನ್ನುವ ಬಗ್ಗೆ ಪರಿಶೀಲನೆ ನಡೆಯುತ್ತಿದೆ. ಅವರು ಹೇಳಿರುವ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ : ಬಸವಕಲ್ಯಾಣದಿಂದ ಬೆಂಗಳೂರಿಗೆ ಬೆಳಿಗ್ಗೆ 6 ಗಂಟೆಗೆ ಒಂದು ಬಸ್ಸಿದ್ದು, ಅದು ರಾತ್ರಿ 12 ಗಂಟೆಗೆ ಬೆಂಗಳೂರನ್ನು ತಲುಪುವುದರಿಂದ ಪ್ರಯಾಣಿಕರಿಗೆ ರಾತ್ರಿ 12 ಗಂಟೆಯಲ್ಲಿ ವಸತಿ ಸಿಗಲು ತೊಂದರೆಯಾಗುತ್ತದೆ. ಆದುದರಿಂದ, ಅದರ ಸಮಯವನ್ನು ಬದಲಿಸಿ, ಮಧ್ಯಾಹ್ನ 2 ಗಂಟೆಗೆ ಹೊರಟು ಬೆಳಿಗ್ಗೆ 7 ಗಂಟೆಗೆ ಬೆಂಗಳೂರು ತಲುಪುವಂತೆ ಮಾಡಿದರೆ ಒಳ್ಳೆಯದು.

ಶ್ರೀ ಎಂ. ಸಿ. ನಾಣಯ್ಯ : ಈಗ ಬಸವಕಲ್ಯಾಣದಿಂದ ಬೆಂಗಳೂರಿಗೆ ಒಂದು ಬಸ್ಸಿದೆ. ಆದರೆ, ಅದು ಬೆಂಗಳೂರನ್ನು ತಲುಪಲು ರಾತ್ರಿ 12 ಗಂಟೆಯಾಗುತ್ತಿದೆ. ಆದುದರಿಂದ, ಸಮಯವನ್ನು ಬದಲಾಯಿಸುವುದು ಪರಿಶೀಲನೆಗೆ ಯೋಗ್ಯವಾಗಿದೆ. ನಾವು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ : ಅಲ್ಲಿನ ಬಸ್‌ಸ್ಟಾಂಡ್‌ನ ಡಾಂಬರೀಕರಣ ಸರಿಯಾಗಿ ಮಾಡುತ್ತಿಲ್ಲ.

ಶ್ರೀ ಎಂ. ಸಿ. ನಾಣಯ್ಯ : ಅದರ ಬಗ್ಗೆ ಈಗಲೇ ಸೂಚನೆ ಕೊಡುತ್ತಿದ್ದೇನೆ, ಅದನ್ನು ಮಾಡಲು ಕ್ರಮ ಕೈಗೊಳ್ಳುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಇದಕ್ಕೆ ನನ್ನದೊಂದು ಉಪ ಪ್ರಶ್ನೆ. ಈ ಮ್ಯಾಕ್ಸಿಕ್ಯಾಬ್‌ಗಳು ಓಡಾಡುವುದರಿಂದ ಬಹಳಷ್ಟು ಅಪಘಾತಗಳು ಸಂಭವಿಸುತ್ತವೆ. ಇವರಲ್ಲಿ ಕೆಲವರಿಗೆ ಲೈಸನ್ಸ್ ಕೂಡ ಇರುವುದಿಲ್ಲ. ಪರವಾನಗಿ ಇಲ್ಲದಿದ್ದರೂ ಕೂಡ ಇವರು ಮ್ಯಾಕ್ಸಿಕ್ಯಾಬ್‌ಗಳನ್ನು ಓಡಾಡಿಸುವುದರಿಂದ ಜನರಿಗೆ ಬಹಳ ಉಪಯೋಗವಾಗಿದೆ. ಏಕೆಂದರೆ, ಕೆಎಸ್ಆರ್‌ಟಿಸಿಯವರು ಸರಿಯಾಗಿ ಬಸ್ ನಡೆಸದೇ ಇರುವುದರಿಂದ ಪ್ರತಿ ಬಸ್ ಸ್ಟಾಪ್‌ನಲ್ಲಿ ಸುಮಾರು ನೂರಾರು ಜನರು ಬಸ್ಸಿಗಾಗಿ

ಕಾಯುತ್ತಿರುತ್ತಾರೆ. ಇದರಿಂದಾಗಿ ಸರ್ಕಾರಕ್ಕೆ ಲಾಸ್ ಆದರೂ ಪರವಾಗಿಲ್ಲ ಜನರಿಗೆ ಬಹಳ ಉಪಯೋಗವಾಗಿದೆ. ಆದರೆ ಇಲ್ಲಿ ವಸ್ತುಸ್ಥಿತಿ ಏನಾಗಿದೆ ಎಂದರೆ, ಈ ಮ್ಯಾಕ್ಸಿಕ್ಯಾಬ್‌ಗಳು ಸಿಂಗಲ್ ಟೈರ್ಸ್‌ನಲ್ಲಿ ಓಡಾಡುತ್ತಿವೆ, ಅದರಲ್ಲಿ ಜನರು ಕೂಡುತ್ತಾರೆ, ಇದರಿಂದಾಗಿ ಪ್ರತಿದಿವಸ ಬಹಳಷ್ಟು ಅಪಘಾತಗಳಾಗುತ್ತವೆ. ಉದಾಹರಣೆಗೆ ಹೇಳುವುದಾದರೆ, ನನಗೆ ಗೊತ್ತಿರುವ ಹಾಗೆ ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರತಿದಿವಸ ಅಪಘಾತದಿಂದಾಗಿ ಸಾವಿಗೀಡಾಗುತ್ತಿದ್ದಾರೆ. ದಯಮಾಡಿ ತಾವು ಅವರಿಗೆ ಕೊನೆಪಕ್ಷ ಡಬಲ್‌ಟೈರ್ ಹಾಕಿ ಓಡಿಸುವುದಕ್ಕೆ ಹಾಗೂ ಪರವಾನಗಿ ಕೊಡುವುದಕ್ಕೆ ತಾವು ಒಂದು ಆದೇಶ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ : ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಮ್ಯಾಕ್ಸಿಕ್ಯಾಬ್‌ಗಳಿಗೆ ಪರವಾನಿಗಿ ಕೊಟ್ಟಾದ ಮೇಲೆ ಸಾರ್ವಜನಿಕರಿಂದ ನಮಗೆ ಕೆಲವು ಅಪಾದನೆಗಳು ಬಂದಿರುವುದು ನಿಜ. ಕೆಲವು ಭಾಗಗಳಲ್ಲಿ ಪರವಾನಿಗೆ ಇಲ್ಲದೆ ಮ್ಯಾಕ್ಸಿಕ್ಯಾಬ್‌ಗಳನ್ನು ಓಡಿಸುವುದು ಸತ್ಯಸಂಗತಿ. ಹಾಗೂ ಪರವಾನಗಿ ತೆಗೆದುಕೊಂಡು ಹಲವಾರು ಜನರನ್ನು ಕೂರಿಸಿಕೊಂಡು ಈ ರೀತಿ ಅಪಘಾತಕ್ಕೆ ಒಳಗಾಗಿರುವ ಸಂಗತಿ, ಎಲ್ಲಾ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಮಾನ್ಯ ಸದಸ್ಯರು, ಸಿಂಗಲ್ ಟೈರ್ಸ್ ಹಾಕಿ ಮ್ಯಾಕ್ಸಿಕ್ಯಾಬ್‌ಗಳನ್ನು ಓಡಿಸುವುದರಿಂದ ಸಾಕಷ್ಟು ಅಪಘಾತಗಳು ಉಂಟಾಗುತ್ತವೆ, ಆದ್ದರಿಂದ ಡಬಲ್ ಟೈರ್ಸ್ ಇರುವ ಮ್ಯಾಕ್ಸಿಕ್ಯಾಬ್‌ಗಳನ್ನು ಓಡಿಸುವಂತಹ ಪ್ರಯತ್ನಕ್ಕೆ ನಿಮ್ಮ ಕ್ರಮ ಏನು ಎಂದು ಕೇಳಿದ್ದಾರೆ. ಮ್ಯಾಕ್ಸಿಕ್ಯಾಬ್‌ನಲ್ಲಿ ಸುಮಾರು 13 ರಿಂದ 14 ಜನ ಪ್ರಯಾಣಿಕರಗಿಂತ ಜಾಸ್ತಿ ಕೂರಿಸಿಕೊಂಡು ಹೋಗಬಾರದು ಎನ್ನುವುದು ಇದೆ. ಆದರೆ ಕೆಲವು ಸಂದರ್ಭಗಳಲ್ಲಿ ಸುಮಾರು 30ರಿಂದ 40 ಜನರನ್ನು ಕೂರಿಸಿಕೊಂಡು ಹೋಗುವಂತಹ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಆದ್ದರಿಂದ, ಇದಕ್ಕೆ ಅನುಗುಣವಾಗಿ, ನಾವು ಕಾನೂನಿನ ಚೌಕಟ್ಟಿನಲ್ಲಿ ಇದನ್ನು ಪರಿಶೀಲಿಸಿ, ನಿಯಮಗಳಡಿಯಲ್ಲಿ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ನಾವು ಜಾರಿಗೆ ತರುತ್ತೇವೆ.

ಗಣಿ ಪ್ರಾರಂಭಿಸಲು ಇರುವ ನಿಬಂಧನೆಗಳು

189 - ಶ್ರೀ ವೈಜ್ಯನಾಥ ಪಾಟೀಲ್ (ಚಿಂಚೋಳಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಣಿ ಪ್ರಾರಂಭಿಸಲು ಇರುವ ನಿಬಂಧನೆಗಳೇನು?

ಆ) ಗಣಿಗಳಿಂದ ಜನರ ಜೀವನಕ್ಕೆ ತೊಂದರೆಯಾಗುವ ಪರಿಸ್ಥಿತಿ ಉದ್ಭವಿಸಿದರೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) ಕೇಂದ್ರ ಸರ್ಕಾರವು ಹೊರಡಿಸಿರುವ ಖನಿಜ ರಿಯಾಯಿತಿ ನಿಯಮಗಳು 1960ರ ಅಡಿಯಲ್ಲಿ ಮುಖ್ಯ ಖನಿಜಗಳ ಗಣಿಗಾರಿಕೆ ಪ್ರಾರಂಭಿಸುವ ಕುರಿತು ಕಾರ್ಯವಿಧಾನವನ್ನು ವಿವರಿಸಲಾಗಿದೆ. ಅದೇ ರೀತಿ ಉಪ ಖನಿಜಗಳ ಗಣಿಗಾರಿಕೆ ಬಗ್ಗೆ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು 1994ರಲ್ಲಿ ಕಾರ್ಯವಿಧಾನವನ್ನು ನೀಡಲಾಗಿದೆ.